# Hebbal Tunnel Project : IISc ವರದಿಯಲ್ಲಿ ಮಹತ್ವದ ಅಂಶ ಬಹಿರಂಗ, ಗಂಭೀರ ತಪ್ಪುಗಳು - ಸರ್ಕಾರಕ್ಕೆ ಎಚ್ಚರಿಕೆ!

Authored By: ಬಾಲರಾಜ್ ತಂತ್ರಿ | Vijaya Karnataka Web • 27 Aug 2026, 12:01 pm IST

Subscribe YouTube 1M

Hebbal Tunnel Project : ರಾಜಧಾನಿ ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ಬಗೆಹರಿಸಲು ಹೆಬ್ಬಾಳ ಜಂಕ್ಷನ್‌'ನಿಂದ ಮೇಖ್ರಿ ವೃತ್ತದವರೆಗೆ ನಿರ್ಮಿಸಲಿರುವ ಸುರಂಗ ರಸ್ತೆಗೆ ಸಂಬಂಧಿಸಿದಂತೆ, ಐಐಎಸ್ ಸಿ ಅಧ್ಯಯನವನ್ನು ನಡೆಸಿ, ವರದಿಯನ್ನು ನೀಡಿದೆ. ಇದು, ನಗರದ ಟ್ರಾಫಿಕ್ ಸಮಸ್ಯೆಗೆ ಪರಿಹಾರವಲ್ಲ, ಬದಲಿಗೆ ಇನ್ನಷ್ಟು ಟ್ರಾಫಿಕ್ ಸಮಸ್ಯೆಯನ್ನು ತಂದೊಡ್ಡಲಿದೆ ಎಂದು ತನ್ನ ವರದಿಯಲ್ಲಿ ಹೇಳಿದೆ.

**ಹೈಲೈಟ್ಸ್:**

- 1,139 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ 2.2 ಕಿ.ಮೀ ಉದ್ದದ, 6 ಪಥದ ಮಾರ್ಗ
- ಹೆಬ್ಬಾಳ ಸುರಂಗ ಮಾರ್ಗ ಯೋಜನೆ ಟ್ರಾಫಿಕ್ ಸಮಸ್ಯೆಗೆ ಪರಿಹಾರವಲ್ಲ ಬದಲಿಗೆ ದಟ್ಟಣೆ ಹೆಚ್ಚಲಿದೆ
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಧ್ಯಯನದ ವರದಿ ಬಹಿರಂಗ, ಸರ್ಕಾರಕ್ಕೆ ಎಚ್ಚರಿಕೆ



ಹೆಬ್ಬಾಳ ಸುರಂಗ ಮಾರ್ಗ ಯೋಜನೆ - IISc report

ಬೆಂಗಳೂರು : ಕರ್ನಾಟಕ ಸರ್ಕಾರದ ಮತ್ತು ಜಿಬಿಎಯ (Greater Bengaluru Authority) ಮಹತ್ವಾಕಾಂಕ್ಷೆಯ, ಹೆಬ್ಬಾಳ ಜಂಕ್ಷನ್‌'ನಿಂದ ಮೇಖ್ರಿ ವೃತ್ತದವರೆಗೆ ನಿರ್ಮಿಸಲಿರುವ ಸುರಂಗ ಯೋಜನೆ, ಸಂಚಾರ ದಟ್ಟಣೆ ಕಮ್ಮಿ ಮಾಡಲು ಸೂಕ್ತವಾದ ಪ್ರಾಜೆಕ್ಟ್ ಅಲ್ಲ ಎಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ತನ್ನ ಅಧ್ಯಯನದ ವರದಿಯಲ್ಲಿ ಉಲ್ಲೇಖಿಸಿದೆ.